# ಪ್ರಾರ್ಥನೆ

## ಶ್ರೀಶಾರದಾಸ್ತುತಿಸಪ್ತಕಮ್

ಯಾ ಮಾತಾ ದುಹಿತಾ ಮಹಾಜಲನಿಧೇರ್ಲಕ್ಷ್ಮೀತಿ ಸಂಗೀಯತೇ
ಯಾ ಮಾತಾ ದುಹಿತಾ ಮಹಾಹಿಮಗಿರೇರ್ಗೌರೀತಿ ಚಾಖ್ಯಾಯತೇ।
ಯಾ ವಾಣೀ ವಿಮಲಾ ವಿರಿಂಚಿಮುಖತೋ ನಿರ್ಗತ್ಯ ರಾರಾಜತೇ
ಸಾ ಮಾಂ ರಕ್ಷತು ಶಾರದಾ ಸುಮತಿದಾ ಶ್ರೀರಾಮಚಂದ್ರಾತ್ಮಜಾ
॥ ೧ ॥

ಯಾವ ಜಗನ್ಮಾತೆಯು ಕ್ಷೀರಸಮುದ್ರದ ಮಗಳಾಗಿ ಜನಿಸಿ ಲಕ್ಷ್ಮೀ ಎಂದು ಕರೆಯಲ್ಪಟ್ಟಳೋ, ಯಾವ ಜಗನ್ಮಾತೆಯು ಹಿಮವತ್ಪರ್ವತದ ಮಗಳಾಗಿ ಜನಿಸಿ ಗೌರೀ ಎಂದು ಹೇಳಲ್ಪಟ್ಟಳೋ, ಯಾವ ಪರಿಶುದ್ಧಳಾದ ಸರಸ್ವತಿಯು ಬ್ರಹ್ಮನ ಮುಖದಿಂದ (ವೇದರೂಪವಾಗಿ) ಹೊರಬಂದು ರಾರಾಜಿಸುತ್ತಿರುವಳೋ—ಶ್ರೀರಾಮಚಂದ್ರ (ಮುಖರ್ಜಿಯ) ಮಗಳಾಗಿ ಜನಿಸಿದ, ಸದ್ಬುದ್ಧಿಯನ್ನು ಕರುಣಿಸುವ, ಆ ಶಾರದೆಯು ನನ್ನನ್ನು ರಕ್ಷಿಸಲಿ.

ಯಾ ಲೀಲಾಸಹಚಾರಿಣೀ ನರಗುರೋಃ ಶ್ರೀರಾಮಕೃಷ್ಣಸ್ಯ ಯಾ
ವಿಶ್ವೇಷಾಂ ಚ ದಿವೌಕಸಾಂ ಪ್ರಣುವತಾಮಿಷ್ಟಾರ್ಥಸಿದ್ಧಿಪ್ರದಾ ।
ಯಾಮಾರಾಧ್ಯ ಹಿ ಸರ್ವಯೋಗಿಮುನಯಃ
ಪ್ರಾಪ್ತಾ ವಿಮುಕ್ತಿಂ ಸ್ಥಿರಾಂ
ತಾಮಂಬಾಂ ನ ಉಪಾಸ್ಮಹೇ
ತ್ರಿಜಗತಾಮೇಕಾಶ್ರಯಾಂ ಶಾರದಾಮ್ ॥ ೨ ॥

ಯಾರು ಲೋಕಗುರುವಾದ ಶ್ರೀರಾಮಕೃಷ್ಣರ ಲೀಲೆಗೆ ಸಹಕಾರಿಯಾಗಿ ಅವತರಿಸಿದಳೋ, ಯಾರು ನಮಸ್ಕರಿಸುತ್ತಿರುವ ಸಕಲ ದೇವತೆಗಳಿಗೂ ಅವರವರ ಇಷ್ಟಾರ್ಥಗಳನ್ನು ಸಲ್ಲಿಸುವಳೋ, ಯಾರನ್ನು ಪೂಜಿಸಿ ಎಲ್ಲ ಯೋಗಿಗಳೂ ಮುನಿಗಳೂ ಶಾಶ್ವತ ಮುಕ್ತಿಯನ್ನು ಪಡೆದರೋ ಅಂಥ, ಮೂರುಲೋಕಗಳಿಗೂ ಏಕಮಾತ್ರ ಆಶ್ರಯವಾದ, ನಮ್ಮ ಶಾರದಾಮಾತೆಯನ್ನು ಉಪಾಸಿಸುತ್ತೇವೆ.

ಭವಾಗ್ನಿ ಸಂದಗ್ಧದುರಿತನಿಹತೈರ್ದುಃಖಭರಿತೈಃ
ಹರೇರ್ದೃಷ್ಟ್ವಾ ಪದ್ಮಂ ಯದ್ಧೃದಹಹ ಮುಕುಲೀಭೂತಸುದಲಮ್ ।
ಧ್ರುವಂ ತತ್ಪೀಡಾಯಾಸ್ತ್ರಿದಿವಮಧುಗಂಗೇವ ಗಲಿತಾ
ದಯಾ ಯಾ ಮಾತಾಽಭೂದವತು ದಯಯಾ
ಮಾಂ ಜಯತು ಸಾ ॥ ೩ ॥

ಸಂಸಾರಾಗ್ನಿಯಲ್ಲಿ ಬೆಂದು, ಕಷ್ಟಗಳಿಂದ ಹೊಡೆಯಲ್ಪಟ್ಟು, ದುಃಖದಿಂದ ತುಂಬಿದವರನ್ನು ನೋಡಿ ಶ್ರೀಹರಿಯ ಹೃದಯಕಮಲವು 'ಅಯ್ಯೋ!' ಎಂದು ಮುಚ್ಚಿಕೊಂಡಿತಂತೆ! ಇದರ ಹಿಂಡುವಿಕೆಯಿಂದಾಗಿ ಜೇನಿನಂತೆ ಸಿಹಿಯಾದ ಮತ್ತು ಸ್ವರ್ಗಲೋಕದ ಗಂಗೆಯಂತೆ ಪವಿತ್ರವಾದ (ಶ್ರೀಹರಿಯ) ದಯೆಯು ಕೆಳಗಿಳಿದು ಬಂದು ಶ್ರೀಶಾರದಾಮಾತೆಯಾಯಿತು. ಅಂಥ ಶ್ರೀಮಾತೆಯು ನನ್ನನ್ನು ಕರುಣೆಯಿಂದ ಕಾಪಾಡಲಿ. ಆಕೆಗೆ ಜಯವಾಗಲಿ !

ಶಾಖಾಪಲ್ಲವಪತ್ರಪುಷ್ಪಭರಿತಃ ಕಶ್ಚಿನ್ಮಹಾವಿದ್ರುಮಃ
ಛಾಯಾಂ ಯಚ್ಛತಿ ಶೀತಲಾಮತಿಹಿತಾಂ
ಪೌಷ್ಪಂ ಚ ವರ್ಷಂ ಸುಖಮ್ ।
ಆತ್ಮಾನಂ ನನು ವೃಶ್ಚತೇಽಪಿ ಸ ಯಥಾ ಮಾತಾ ತಥಾ ಪೀಡನಂ
ಬಂಧೂನಾಂ ಸತತಂ ಕುಶಿಷ್ಯಚರಿತಂ ಸೋಢ್ವಾ ವರಾನ್ಯಚ್ಛತಿ
॥ ೪ ॥

ಕೊಂಬೆಗಳು ಚಿಗುರು ಎಲೆ ಹೂಗಳು—ಇವುಗಳಿಂದ ತುಂಬಿ ಹೋಗಿರುವ ಮಹಾವೃಕ್ಷವೊಂದು ತನ್ನನ್ನು ಕಡಿಯುವವನಿಗೆ ಸಹ ತಣ್ಣನೆಯ ಮತ್ತು ಅತಿ ಹಿತಕರವಾದ ನೆರಳನ್ನು ಕೊಡುವುದಲ್ಲದೆ ಅವನ ಮೇಲೆ ಸುಖವಾದ ಹೂವಿನಮಳೆಯನ್ನೇ ಕರೆಯುವಂತೆ, ಶ್ರೀಮಾತೆಯೂ ಕೂಡ ತನ್ನ ಬಂಧುಗಳ ಮತ್ತು ಕುಶಿಷ್ಯರ ಪೀಡೆಗಳನ್ನು ಸದಾ ಸಹಿಸಿಕೊಂಡು ಅವರಿಗೆ ವರಗಳನ್ನು ಕೊಡುತ್ತಾಳೆ.

ಸರ್ವವೇದಶಾಸ್ತ್ರಶಿಲ್ಪಸಾರಬೋಧದಾಯಿನೀಂ
ಶರ್ವಧಾತೃವಿಷ್ಣುರೂಪಸರ್ವದೇವವಿಗ್ರಹಾಮ್ ।
ಸರ್ವಲೋಕಸರ್ವಜೀವಸರ್ವಭೂತಧಾರಿಣೀಂ
ಸರ್ವತಾಪಹಾರಿಣೀಂ ಸದಾ ನಮಾಮಿ ಶಾರದಾಮ್ ॥ ೫ ॥

ಎಲ್ಲ ವೇದಗಳ ಶಾಸ್ತ್ರಗಳ ಮತ್ತು ಇತರ ವಿದ್ಯೆಗಳ ಜ್ಞಾನಸಾರವನ್ನು ಕೊಡುವ, ಶಿವ ಬ್ರಹ್ಮ ವಿಷ್ಣು ಮೊದಲಾದ ಎಲ್ಲ ದೇವತೆಗಳ ಸ್ವರೂಪಿಣಿಯಾದ, ಸಕಲ ಲೋಕಗಳ ಜೀವಗಳ ಮತ್ತು ಪ್ರಾಣಿಗಳ ಆಧಾರವಾದ ಮತ್ತು ಸರ್ವತಾಪಗಳನ್ನೂ ಹೋಗಲಾಡಿಸುವ ಶಾರದೆಯನ್ನು ಸದಾ ನಮಸ್ಕರಿಸುತ್ತೇನೆ.

"ಪರದೋಷಾನನ್ವೇಷ್ಟುಂ ಯಚ್ಛೀಲಂ ತವ ಸೂನೋ
ತದ್ಧಿತ್ವಾ ಪರಮೇಶೇ ಭಕ್ತಿಂ ವೈ ಕುರು ಸತತಮ್ " ।
ಇತ್ಯುಕ್ತ್ವಾ ಮೃತಿಕಾಲೇ ಪರಮೇಶಂ ಪ್ರಾಪ್ತಾ ಯಾ
ಸಾಽಪಾಯಾತ್ ಪಾಯಾನ್ಮಾಂ ಮೃತಿಭೀತಂ ಸುಖದಾಸಮ್
॥ ೬ ॥

"ಎಲೈ ಮಗುವೆ, ಇತರರಲ್ಲಿ ದೋಷವನ್ನು ಹುಡುಕುವ ನಿನ್ನ ಸ್ವಭಾವವನ್ನು ಬಿಟ್ಟು, ಎಡೆಬಿಡದೆ ಪರಮೇಶ್ವರನಲ್ಲಿ ಭಕ್ತಿಯನ್ನು ಮಾಡು" ಎಂದು ಅವಸಾನಕಾಲದಲ್ಲಿ ಉಪದೇಶಿಸಿ ಪರಮೇಶ್ವರನನ್ನು ಸೇರಿದ ಆಕೆಯು ಮೃತ್ಯುವಿಗೆ ಹೆದರಿರುವ ಮತ್ತು ಪ್ರಾಪಂಚಿಕ ಸುಖಗಳಿಗೆ ದಾಸನಾದ ನನ್ನನ್ನು ಅಪಾಯಗಳಿಂದ ಪಾರುಮಾಡಲಿ.

ಮಾತಾ ಮೇ ಪರಮಾ ಶಕ್ತಿಃ ಶಾರದೇತಿ ಪ್ರಥಾಂ ಗತಾ ।
ಸ್ಥಿತೇ ಚೈವಂ ಜನೇರ್ಮೃತ್ಯೋಃಸ್ಸಂಕಷ್ಟಾನ್ಮೇ ಭಯಂ ಕುತಃ ॥೭ ॥

ಶಾರದೆಯೆಂದು ಪ್ರಸಿದ್ಧಳಾದ ಪರಾಶಕ್ತಿಯು ನನ್ನ ಮಾತೆಯಾಗಿರಲು ಜನನ ಮರಣಗಳ ಕಷ್ಟದಿಂದ ನನಗೆ ಭಯವು ಎಲ್ಲಿಂದ ಬಂದೀತು?

– ಸ್ವಾಮಿ ಹರ್ಷಾನಂದ